


***ಸ್ಪೂರ್ತಿದಾತರು:***

**ಶ್ರೀ ಎಲ್.ಸಿ.ಜೈನ್,**
ಮಾಜಿ ಸದಸ್ಯರು, ರಾಷ್ಟ್ರೀಯ ಯೋಜನಾ ಆಯೋಗ ಮತ್ತು ದಕ್ಷಿಣ ಆಫ್ರಿಕಾದ ಮಾಜಿ ಭಾರತೀಯ ರಾಯಭಾರಿಗಳು

**ಶ್ರೀ ಮನು ಕುಲಕರ್ಣಿ,** ಗೌರವಾನ್ವಿತ ಹಿರಿಯ ಫೆಲೋ, ಸಾಮಾಜಿಕ ವಿಜ್ಞಾನಗಳ ಸಂಸ್ಥೆ, ಬೆಂಗಳೂರು

***ಸಲಹಾ ಸಮಿತಿ ಸದಸ್ಯರು:***

**ಡಾ. ವಿನೋದ್ ವ್ಯಾಸುಲು,**
ವಿಕೇಂದ್ರೀಕರಣ ಚಿಂತಕರು

**ಶ್ರೀ ಚಿರಂಜೀವ್ ಸಿಂಗ್** ಬೆಂಗಳೂರು, ಮಾಜಿ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರಕಾರ

**ಶ್ರೀ ಮೀನಾಕ್ಷಿ ಸುಂದರಂ,** ಮಾಜಿ ಕಾರ್ಯದರ್ಶಿಗಳು, ಗ್ರಾಮೀಣ ಅಭಿವೃದ್ಧಿ ಮಂತ್ರಾಲಯ, ಭಾರತ ಸರಕಾರ

**ಶ್ರೀ ಮನು ಕುಲಕರ್ಣಿ,** ಗೌರವಾನ್ವಿತ ಹಿರಿಯ ಫೆಲೋ, ಸಾಮಾಜಿಕ ವಿಜ್ಞಾನಗಳ ಸಂಸ್ಥೆ, ಬೆಂಗಳೂರು

**ಶ್ರೀ ರಘುನಂದನ್ ರಾಘವನ್,**
ಮಾಜಿ ಜಂಟಿ ಕಾರ್ಯದರ್ಶಿ, ಪಂಚಾಯತ್ ರಾಜ್ ಮಂತ್ರಾಲಯ ಭಾರತ ಸರ್ಕಾರ, ಪ್ರಧಾನ ಕಾರ್ಯದರ್ಶಿ ಕರ್ನಾಟಕ ಸರ್ಕಾರ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕಾರ್ಯದರ್ಶಿ

**ಶ್ರೀ. ಮಹಿಮಾ ಪಟೇಲ್**
ಟ್ರಸ್ಟೀ, ಜೆ.ಹೆಚ್. ಪಟೇಲ್ ಫೌಂಡೇಶನ್

**ಶ್ರೀ ಮೈಕೆಲ್ ಫೆರ್ನಾಡಿಸ್**
ಕಾರ್ಮಿಕ ಮುಖಂಡರು

**ಶ್ರೀ ವಿನಯ್ ಬೈಂದೂರು**
ಸಂಶೋಧಕರು, ವಿಕೇಂದ್ರಿಕರಣ

***ಸಂಯೋಜನಾ ಸಮಿತಿ:***

**ಗ್ರಾಮ ಸ್ವರಾಜ್ಯ ವೇದಿಕೆ**
**ಮಹಿಳಾ ಸಮಖ್ಯ ಕರ್ನಾಟಕ**
**ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್**
**ಸುಗ್ರಾಮ**
**ಜೆ.ಹೆಚ್.ಪಟೇಲ್ ಫೌಂಡೇಶನ್**

***ಸಂಯೋಜಕರು:***

**ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್**
303/2, ಲಾಲ್ ಬಹದ್ದೂರ್ ಶಾಸ್ತ್ರಿ ನಗರ
ವಿಮಾನಪುರ ಅಂಚೆ
ಬೆಂಗಳೂರು-560 017
ಫೋನ್: 080-25234270, 25234272, 25234611
ಇ-ಮೇಲ್: cwc@pobox.com
cwcblr@gmail.com
ವೆಬ್:
www.theconcernedforworkingchildren.org

<u>ಪ್ರಕಟಣೆಯ ಕೃಪೆಗಾಗಿ</u>

**"ಚುನಾವಣೆಗಳಲ್ಲಿ 'ಯಾವ ಅಭ್ಯರ್ಥಿಗೂ ಮತ ಹಾಕಲಾರೆ' (ನೋಟಾ, NOTA) ನಮ್ಮ ಆಯ್ಕೆ ಗಂಭೀರವಾಗಿ ಪರಿಗಣನೆ ಆಗಬೇಕು." ನಾನು ಮತ್ತು ನಮ್ಮ ಮಾರಾಟಕ್ಕಿಲ್ಲ ಆಂದೋಲನದ ಒತ್ತಾಯ**

**ದಿನಾಂಕ: 1ನೇ ಎಪ್ರಿಲ್, 2014**
**ಸ್ಥಳ: ಪುರ ಭವನ(ಟೌನ್ ಹಾಲ್)**

**'ನಾವು ಮತ್ತು ನಮ್ಮ ಮತ ಮಾರಾಟಕ್ಕಿಲ್ಲ' 'ಸ್ವಾಭಿಮಾನಿ ಮತದಾರ ಹೋರಾಟ'** ವನ್ನು ಹಮ್ಮಿಕೊಂಡಿರುವ **ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ** ಬೆಂಗಳೂರು ನಗರದ ಪುರ ಭವನ(ಟೌನ್ ಹಾಲ್)ದಲ್ಲಿ ಪತ್ರಿಕಾ ಗೋಷ್ಠಿ ಹಾಗೂ ಕಾರ್ಯಕ್ರಮವನ್ನು 1ನೇ ಎಪ್ರಿಲ್,2014ರಂದು ಹಮ್ಮಿಕೊಂಡಿದೆ. ಸ್ಥಳೀಯ ಆಡಳಿತ ಸಂಸ್ಥೆಗಳ ಸ್ವಾಯತ್ತತೆಗಾಗಿ **ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ** ನಿರಂತರವಾಗಿ ಶ್ರಮಿಸುತ್ತಿದೆ. **ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನದ** ಸಂಯೋಜಕರಾದ ನಂದನಾ ರೆಡ್ಡಿ ಅವರ ಅಭಿಪ್ರಾಯದಂತೆ, "ಈ ಬಾರಿ ಲೋಕ ಸಭಾ ಚುನಾವಣಾ ಮತ ಯಂತ್ರದಲ್ಲಿ **ಯಾವ ಅಭ್ಯರ್ಥಿಗೂ ಮತ ಹಾಕಲಾರೆ' (ನೋಟಾ, 'None Of The Above'NOTA)** ಆಯ್ಕೆಯನ್ನು ಸೇರಿಸಲಾಗಿದೆ. ಪ್ರಜೆಗಳ ಪವಿತ್ರವಾದ ಮತಗಳು ಮಾರುವ, ಖರೀದಿಸುವ ಪರಿಸ್ಥಿತಿಗೆ ಬಂದು ತಲುಪಿದ್ದನ್ನು ನೋಡುತ್ತಾ ಕೈಕಟ್ಟಿ ಸುಮ್ಮನೆ ಕೂರಲು ಈ ದೇಶದ ಪ್ರಜ್ಞಾವಂತ ಪ್ರಜೆಗಳಾದ ನಮಗೆ ಇನ್ನು ಸಾಧ್ಯವಿಲ್ಲ. ಇಂತಹ ಕಾನೂನು ಬಾಹಿರ ಚಟುವಟಿಕೆಯು ಪ್ರಜೆಗಳಾದ ನಮ್ಮ ಸಾರ್ವಭೌಮತೆಯನ್ನು ಅತ್ಯಂತ ಕೆಳಮಟ್ಟಕ್ಕೆ ತಂದು ನಿಲ್ಲಿಸುತ್ತದೆ. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಶಕ್ತಿಯುತವಾಗಿ ಬೇರೂರುವಂತೆ ಮಾಡಲು, ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ನಮ್ಮ ಸಕ್ರಿಯ ಭಾಗವಹಿಸುವಿಕೆಗೆ, ನಮ್ಮ ಅಭಿಪ್ರಾಯ ಭೇಧ, ಸಕರಾತ್ಮಕ ವಿರೋಧಗಳನ್ನು ವ್ಯಕ್ತಪಡಿಸಲು ದಾರಿಗಳನ್ನು ನಾವು ಈಗ ಕಂಡುಕೊಳ್ಳಬೇಕಿದೆ."

ನಮ್ಮ ದೇಶದ ಸರ್ವೋನ್ನತ ನ್ಯಾಯಾಲಯ ಮತದಾರರಿಗೆ ತಮ್ಮ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶವನ್ನು ಕಲ್ಪಿಸಿದೆ. ಇದರಿಂದ ಹೆಚ್ಚು ಹೆಚ್ಚು ನೈತಿಕತೆ ಇರುವ ವ್ಯಕ್ತಿಗಳು ಚುನಾವಣೆಗಳಲ್ಲಿ ಸ್ಪರ್ಧಿಸಲು ಮುಂದೆ ಬರಲು ಸಾಧ್ಯವಿದೆ. ಹಾಗಿದ್ದಾಗ್ಯೂ ನಾವು 'ಯಾವ ಅಭ್ಯರ್ಥಿಗೂ ಮತ ಹಾಕಲಾರೆ( **ನೋಟಾ, NOTA**) ಎನ್ನುವ ಆಯ್ಕೆನ್ನು ಮಾಡಿದರೆ ಏನಾಗುತ್ತದೆ? ಮತ ಕ್ಷೇತ್ರ ಒಂದರಲ್ಲಿ 'ನಾವು ಯಾವ ಅಭ್ಯರ್ಥಿಗೂ ಮತ ಹಾಕಲಾರೆ'(**ನೋಟಾ, NOTA**) ಆಯ್ಕೆಗೆ, ಆ ಕ್ಷೇತ್ರದಲ್ಲಿ ಸ್ಪರ್ಧಿಸಿದ ಎಲ್ಲಾ ಅಭ್ಯರ್ಥಿಗಳು ಪಡೆದ ಮತಕ್ಕಿಂತಲೂ ಹೆಚ್ಚಿದ್ದಾಗ್ಯೂ, ಉಳಿದ ಮತಗಳಲ್ಲಿ ಯಾವ ಅಭ್ಯರ್ಥಿಗೆ ಹೆಚ್ಚಿನ ಮತ ಬಿದ್ದಿದೆಯೋ ಆ ಅಭ್ಯರ್ಥಿ, ಒಂದೊಮ್ಮೆ ಕೇವಲ ಒಂದು ಮತ ಪಡೆದರೂ, ಅವರೇ ಚುನಾವಣೆಯಲ್ಲಿ ಜಯಗಳಿಸುತ್ತಾರೆ. ಯಾವುದೇ ಕ್ಷೇತ್ರದಲ್ಲಿ ಅವಿರೋಧ ಆಯ್ಕೆಯ ಸಂದರ್ಭದಲ್ಲಿ ಸ್ಪರ್ಧಿಸಿದ ಒಬ್ಬರೇ ಅಭ್ಯರ್ಥಿ ಆಯ್ಕೆಯಾಗುತ್ತಾರೆ.

**ಶ್ರೀ ಕೆ. ನವೀನ್**
ಅಧ್ಯಕ್ಷರು

**ಶ್ರೀ ಹೆಚ್.ಕೆ.ಭೂಮಕ್ಕನವರ್**
ಕಾರ್ಯಾಧ್ಯಕ್ಷರು

**ಶ್ರೀ ದಾಮೋದರ ಆಚಾರ್ಯ**
ಪ್ರಧಾನ ಕಾರ್ಯದರ್ಶಿ

**ಶ್ರೀ ಬಿ. ಹೆಚ್. ನಾಗಣ್ಣ, ಶ್ರೀಮತಿ ಲಕ್ಷ್ಮಿ ಡಿ.**
ಮುಖ್ಯ ಸಂಘಟನಾ ಕಾರ್ಯದರ್ಶಿಗಳು

**ಶ್ರೀ ನಾಗೇಶಚಂದ್ರ ಭಟ್**
ಖಜಾಂಚಿ

**ಉಪಾಧ್ಯಕ್ಷರು:** ಶ್ರೀ ಜಂಬುನಾಥ್ ಎಂ, ಶ್ರೀ ಯಾಕೂಬ್ ಕೆ.ಎ, ಶ್ರೀ ಸತೀಶ್ ಗುಬ್ಬಿ, ಶ್ರೀಮತಿ ಚಿತ್ರಮ್ಮ, ಶ್ರೀಮತಿ ಅನ್ನಪೂರ್ಣ ಅನಿಲನಿರ್ವಾಣಿ, ಶ್ರೀಮತಿ ಮಲ್ಲಮ್ಮ, ಶ್ರೀಮತಿ ಕಸ್ತೂರಮ್ಮ, ಶ್ರೀಮತಿ ದೊಡ್ಡವ್ವ

**ಕಾರ್ಯದರ್ಶಿಗಳು:** ಶ್ರೀ ಅಸ್ಕರ್ ಅಲಿ, ಶ್ರೀ ವಾಮನ ನಾಯ್ಕ, ಶ್ರೀ ಬಿ.ಎಸ್.ಶಿವಕುಮಾರ್, ಶ್ರೀಮತಿ ಜಾನಕಮ್ಮ, ಶ್ರೀಮತಿ ಮಂಜುಳಾ ಆರ್. ಸಾತನೂರು, ಶ್ರೀಮತಿ ನೀಲಮ್ಮ, ಶ್ರೀಮತಿ ಕಸ್ತೂರಿ, ಶ್ರೀಮತಿ ಲಲಿತಮ್ಮ

**ಸಂಘಟನಾ ಕಾರ್ಯದರ್ಶಿಗಳು:** ಶ್ರೀ ಶಿವಲಿಂಗಪ್ಪ ತಲ್ಲೂರು, ಶ್ರೀ ಶಿವಕುಮಾರ್ ಶರ್ಮ, ಶ್ರೀಮತಿ ಪ್ರಭಾವತಿ ಶೆಟ್ಟಿ, ಶ್ರೀ ಲಿಂಗರಾಜು, ಶ್ರೀಮತಿ ಚಂದ್ರಮ್ಮ, ಶ್ರೀಮತಿ ಸುವರ್ಣ, ಶ್ರೀಮತಿ ಕಸ್ತೂರಿಬಾಯಿ, ಶ್ರೀಮತಿ ಈಶ್ವರಮ್ಮ

**ಅಂತರ್ಜಾಲ ತಾಣ: www.gpha.weebly.com**

ಅಂತಹ ಸಂದರ್ಭದಲ್ಲಿ ಚುನಾವಣೆಯೇ ನಡೆಯದಿರುವುದರಿಂದ ಮತದಾರರಿಗೆ ಅಭ್ಯರ್ಥಿಯನ್ನು ತಿರಸ್ಕರಿಸಲು ಯಾವುದೇ ಅವಕಾಶ ಇರುವುದಿಲ್ಲ.

**ಚುನಾವಣೆಯಲ್ಲಿ ನಮ್ಮ 'ನಾವು ಯಾವ ಅಭ್ಯರ್ಥಿಗೂ ಮತ ಹಾಕಲಾರೆ'(ನೋಟಾ, NOTA) ಆಯ್ಕೆ ಅಸಿಂದು ಅಥವಾ ತಿರಸ್ಕೃತ ಮತವೆಂದು ಪರಿಗಣನೆ ಆಗಬಾರದೆಂದು ಈ ಪ್ರಚಾರಾಂದೋಲನ ಒತ್ತಾಯಿಸುತ್ತದೆ. ಯಾವಾಗ ಮತದಾರರು 'ನಾವು ಯಾವ ಅಭ್ಯರ್ಥಿಗೂ ಮತ ಹಾಕಲಾರೆ' (ನೋಟಾ, NOTA) ಆಯ್ಕೆ ಮಾಡಿದರೆಂದರೆ, ಆಗ ಮತದಾರರು ಆ ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿ/ಗಳನ್ನು, ರಾಜಕೀಯಪಕ್ಷ/ಗಳನ್ನು ತಿರಸ್ಕರಿಸಿದ್ದಾರೆ ಎಂದು ಪರಿಗಣಿಸಿ ಅಂತಹ ಸ್ಥಾನಗಳಿಗೆ ಮರು ಮತದಾನ ಆಗುವ ವ್ಯವಸ್ಥೆಯಾಗುವಂತೆ ಕ್ರಮ ಕೈಗೊಳ್ಳಬೇಕು.**

**'ಮತದಾರರಾದ ನಮ್ಮನ್ನು ಮೂರ್ಖರ ತರಹ ನಡೆಸಿಕೊಳ್ಳುವುದಕ್ಕೆ ನಮ್ಮ ವಿರೋಧ'** ಕಾರ್ಯಕ್ರಮವನ್ನು, ಎಪ್ರಿಲ್ 1, 2014 ರಂದು ಬೆಂಗಳೂರಿನ ಪುರ ಭವನ (ಟೌನ್ ಹಾಲ್)ದಲ್ಲಿ ನಾವು ಮತ್ತು ನಮ್ಮ ಮತ ಮಾರಾಟಕ್ಕಿಲ್ಲ ಪ್ರಚಾರಾಂದೋಲನ ಹಮ್ಮಿಕೊಂಡಿದೆ. ಬೆಳಗಿನ 11ಗಂಟೆಯಿಂದ ಸಾಯಂಕಾಲ 4 ಗಂಟೆವರೆಗೆ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಮತದಾನ ಪದ್ದತಿಯಲ್ಲಿ ಸುಧಾರಣೆ ವಿಚಾರವಾಗಿ 'ಶೂನ್ಯ ಕಲಾ ತಂಡ' ಹಾಗೂ 'ಆರ್ಟ್ ಆಫ್ ಲಿವಿಂಗ್' ಸಂಸ್ಥೆಯ 'ಬೆಟರ್ ಇಂಡಿಯಾ' ತಂಡದ ಸ್ವಯಂಸೇವಕರಿಂದ ಬೀದಿ ನಾಟಕಗಳು ಇವೆ. ಕಲಾವಿದರಾದ ಗಿರಿಧರ್ ಖಾಸ್ನೀಸ್, ಪುರುಷೋತ್ತಮ ಅಡ್ವೆ, ಜನಾರ್ಧನ ರಾವ್ ಮುಂತಾದವರು, ಈ ದೇಶದ ಪ್ರಜೆಗಳಾಗಿ ನಮ್ಮ ಆಶಯಗಳ ಕುರಿತು ಕಲಾಕೃತಿಗಳನ್ನು ರಚಿಸುತ್ತಾರೆ; ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಅನೇಕರು, ಪ್ರಜಾಪ್ರಭುತ್ವದ ಬಗ್ಗೆ ತಮ್ಮ ಮಹಾತ್ವಾಕಾಂಕ್ಷೆಗಳನ್ನು ಅಭಿವ್ಯಕ್ತಿಗೊಳಿಸಲು, ಚಟುವಟಿಕೆಗಳಿವೆ. 'ನಾವು ಮತ್ತು ನಮ್ಮ ಮತ ಮಾರಾಟಕ್ಕಿಲ್ಲ' ಕಾರ್ಯಕ್ರಮ್ಮಕ್ಕೆ ತಮ್ಮ ಫೋಟೋ ಮತ್ತು ಸಹಿ ನೀಡಲು ಸ್ಥಳದ ವ್ಯವಸ್ಥೆ ಇದೆ.

ನಮ್ಮಿಂದ ಚುನಾಯಿತರಾದ ಪ್ರತಿನಿಧಿಗಳು, ಪ್ರಜೆಗಳಾದ ನಮಗೆ ಉತ್ತರದಾಯಿಗಳಾಗಬೇಕೆಂದು ಅವರನ್ನು ಒತ್ತಾಯಿಸುವ ಮೂಲಕ ಮತದಾರರಾಗಿ ಹಾಗೂ ಈ ದೇಶದ ಪ್ರಜೆಗಳಾಗಿ ನಮಗಿರುವ ಸಾರ್ವಭೌಮತೆಯನ್ನು ಹಾಗು ಗೌರವನ್ನು ಪುನಃ ಸ್ಥಾಪಿಸುವುದು, ಈ ಮೂಲಕ ಚುನಾವಣಾ ವ್ಯವಸ್ಥೆಯ ಪ್ರಜಾಪ್ರಭುತ್ವದ ಪಾವಿತ್ರ್ಯತೆಯನ್ನು ಎತ್ತಿಹಿಡಿಯುವುದು ಈ ಪ್ರಚಾರಾಂದೋಲದ ಉದ್ದೇಶ.

ಕಳೆದೆರಡು ವಾರಗಳಿಂದ ಬೆಂಗಳೂರಿನ ವಿವಿದೆಡೆ ಪಾದಯಾತ್ರೆ, ಬೈಕ್ ಜಾಥಾ, ಸೈಕಲ್ ಜಾಥಾಗಳನ್ನು ಹಮ್ಮಿಕೊಂಡು ಸ್ವಾಭಿಮಾನಿ ಮತದಾರ ಹೋರಾಟದ ಬಗ್ಗೆ ನಾವು ಮತ್ತು ನಮ್ಮ ಮತ ಮಾರಾಟಕ್ಕಿಲ್ಲ ಈ ಪ್ರಚಾರಾಂದೋಲದ ಬಗ್ಗೆ ಮತದಾರರಿಗೆ ತಿಳುವಳಿಕೆ ಕೊಡಲಾಗಿದೆ. ಇದರ ಜೊತೆ ಜೊತೆಗೆ ಮಹಿಳಾ ಸಮಖ್ಯ, ಅಪ್ಸದಂತಹ ಸಂಸ್ಥೆಗಳ ಸಹಯೋಗದಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲೂ ಮತದಾರರಿಗೆ ತಿಳುವಳಿಕೆ ಮೂಡಿಸುವ ಕಾರ್ಯಕ್ರಮಗಳು ನಡೆಯುತ್ತಿವೆ. ಮತದಾರರನ್ನು ಖರೀದಿಸುವ ಬಗ್ಗೆ ಹಾಗೂ ಮತದಾನದ ಪಾವಿತ್ರ್ಯದ ಬಗ್ಗೆ ಹಳ್ಳಿ ಹಳ್ಳಿಗಳಲ್ಲಿ ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನದ ಸದಸ್ಯರಾದ ಗ್ರಾಮ ಪಂಚಾಯತ್ ಹಾಗೂ ಗ್ರಾಮ ಸಭೆಗಳ ಸದಸ್ಯರು ಮನೆ ಮನೆಗೆ ಭೇಟಿ ನೀಡಿ ಮತದಾರರಿಗೆ ತಿಳುವಳಿಕೆ ಮೂಡಿಸುತ್ತಿದ್ದಾರೆ.

ವಿವಿಧ ರಂಗಗಳ ಖ್ಯಾತರು ತಮ್ಮ ಬೆಂಬಲವನ್ನು ಈ ಪ್ರಚಾರಾಂದೋಲನಕ್ಕೆ ನೀಡಿದ್ದಾರೆ. ಗಾಯಕಿ ವಸುಂದರಾ ದಾಸ್, ಕನ್ನಡದ ನಾಯಕ ನಟ ಶಿವರಾಜ್ ಕುಮಾರ್, ಖ್ಯಾತ ನಟ ನಿರ್ದೇಶಕ ಹಾಗೂ ಮೈಸೂರಿನ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ಸ್ಥಾಪಕ ನಿರ್ದೇಶಕ ಡಾ. ನ. ರತ್ನ, ಖ್ಯಾತ ನಟಿ ಭಾರ್ಗವಿ ನಾರಾಯಣ್, ಖ್ಯಾತ ಛಾಯಾ ಚಿತ್ರಗಾರರಾದ ನವರೋಜ್ ಕಾಂಟ್ರಾಕ್ಟರ್, ಬರಹಗಾರ ಹಾಗೂ ಪತ್ರಿಕಾಕರ್ತ ಅಗ್ನಿ ಶ್ರೀಧರ್ ಮುಂತಾದವರು ತಮ್ಮ ಬೆಂಬಲವನ್ನು ನೀಡಿದ್ದಾರೆ. ವಿವಿಧ ರಾಜಕೀಯ ಪಕ್ಷಗಳಿಂದ ವಿವಿಧ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳು ಹಾಗೂ ರಾಜಕೀಯ ಪಕ್ಷಗಳ ಮುಖಂಡರೂ ಸಹ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ.

ತಮ್ಮ ವಿಶ್ವಾಸಿ,

ಬಿ. ದಾಮೋದರ ಆಚಾರ್ಯ
ಪ್ರಧಾನ ಕಾರ್ಯದರ್ಶಿ
ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ